ಸಾಕ್ಷಿಯನ್ನು ದಿಃ 09.12.2024 ರಂದು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಸ್ ಕೆ ವಕೀಲರಿಂದಃ-

ನಾನು ದಾವೆಯಲ್ಲಿ ವಾದಿ ಆಗಿದ್ದು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿದೆ.

ದಿನಾಂಕಃ 30.01.2023 ರ ನೋಂದಯಿತ ಕ್ರಯದ ಕರಾರನ್ನು ನಿಪಿ-1 ಎಂದು , ನಿಪಿ-1 ಕ್ಕೆ ನಾನು , ಪ್ರತಿವಾದಿಯರು , ಹೆಚ್ ಎ ರೇವಣ್ಣ , ಸಾಕ್ಷಿದಾರರಾದ ರಮೇಶ್ ಮತ್ತು ಚಂದ್ರನಾಯಕ್ ಹಾಗೂ ಪತ್ರ ಬರಹಗಾರರಾದ ಗಣೇಶ್ ಸಹಿ ಹಾಕಿದ್ದಾರೆ. ನಿಪಿ-1 ರಲ್ಲಿ ಸದರಿ ಸಹಿಗಳನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ಒಟ್ಟಾಗಿ ನಿಪಿ-1(ಎ) ಎಂದು, 1 ನೇ ಪ್ರತಿವಾದಿಯ ಸಹಿಗಳನ್ನು ಒಟ್ಟಾಗಿ ನಿಪಿ-1(ಬಿ) ಎಂದು , 2 ನೇ ಪ್ರತಿವಾದಿಯ ಸಹಿಗಳನ್ನು ಒಟ್ಟಾಗಿ ನಿಪಿ-1(ಸಿ) ಎಂದು , ರೇವಣ್ಣ ಹೆಚ್ ಎ ರವರ ಸಹಿಗಳನ್ನು ಒಟ್ಟಾಗಿ ನಿಪಿ-1(ಡಿ) ಎಂದು , ಸಾಕ್ಷಿದಾರರಾದ ರಮೇಶ್ ರವರ ಸಹಿಯನ್ನು ನಿಪಿ-1 (ಇ) ಎಂದು , ಸಾಕ್ಷಿದಾರರಾದ ಚಂದ್ರನಾಯಕರವರ ಸಹಿಯನ್ನು ನಿಪಿ-1(ಎಫ್) ಎಂದು , ಪತ್ರ ಬರಹಗಾರರಾದ ಗಣೇಶ್ ರವರ ಸಹಿಯನ್ನು ನಿಪಿ-1(ಜಿ) ಎಂದು ಗುರುತಿಸಲಾಯಿತು. ದಾವಾ ಸ್ವತ್ತಿಗೆ ಸಂಬಂಧಿಸಿದ ಇಸಿಯನ್ನು ನಿಪಿ-2 ಎಂದು , ನನ್ನ ವಕೀಲರ ಮೂಲಕ ಪ್ರತಿವಾದಿಯರಿಗೆ ನೀಡಿದ ನೋಟೀಸಿನ ಕಛೇರಿ ಪ್ರತಿಯನ್ನು ನಿಪಿ-3 ಎಂದು , ಅದನ್ನು ಕಳುಹಿಸಿದ ಬಗ್ಗೆ 3 ಅಂಚೆ ರಶೀದಿಗಳನ್ನು ನಿಪಿ-4 ರಿಂದ 6 ಎಂದು , ಪ್ರತಿವಾದಿಯರಿಗೆ ನೋಟೀಸು ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿ ಪತ್ರಗಳನು ನಿಪಿ-7 ಮತ್ತು 8 ಎಂದು , ಪ್ರತಿವಾದಿಯರು ನೀಡಿದ ಉತ್ತರದ ನೋಟೀಸನ್ನು ನಿಪಿ-9 ಎಂದು, ಅಂಚೆ ಕವರ್ ನ್ನು ನಿಪಿ-10 ಎಂದು ಗುರುತಿಲಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ನೀಡಲಾಗಿದೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ.ಸ.ಇದೆ.,

- ಸಹಿ -

(ಅನಿತ)

ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.ಹುಣಸೂರು.